# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 460 |
| 2 | ಸದಸ್ಯರ ಹೆಸರು | ಶ್ರೀ ಸುನೀಲ್ ವಲ್ಯಾಪುರ್<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3 | ಉತ್ತರಿಸಬೇಕಾದ ದಿನಾಂಕ | 09.12.2020 |
| 4 | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 02 ವರ್ಷಗಳಿಂದ ಕಲಬುರಗಿ ಜಿಲ್ಲೆಯಲ್ಲಿ 11ಇ ಸ್ಕೆಚ್ ಗೆ ಸ್ವೀಕೃತವಾದ ಅರ್ಜಿಗಳ ಸಂಖ್ಯೆ ಎಷ್ಟು; ಅದರಲ್ಲಿ ವಿಲೇವಾರಿ ಮಾಡಲಾದ ಅರ್ಜಿಗಳ ಸಂಖ್ಯೆ ಎಷ್ಟು? | ಕಳೆದ 02 ವರ್ಷಗಳಿಂದ ಕಲಬುರಗಿ ಜಿಲ್ಲೆಯಲ್ಲಿ 11ಇ ಸ್ಕೆಚ್ ಕೋರಿ ಸ್ವೀಕೃತವಾದ ಮತ್ತು ವಿಲೇಯಾದ ಅರ್ಜಿಗಳ ವಿವರ (ಕೆಳಗಿನ ಪಟ್ಟಿ) |

| ತಾಲ್ಲೂಕು | ಪ್ರಾ.ಶಿಲ್ಕು | ಸ್ವೀಕೃತಿ | ಒಟ್ಟು | ವಿಲೇ | ಬಾಕಿ |
|---|---|---|---|---|---|
| ಆಳಂದ | 2707 | 4205 | 6912 | 5205 | 1707 |
| ಅಫ್ಜಲಪುರ | 596 | 2327 | 2923 | 2162 | 761 |
| ಗುಲ್ಬರ್ಗ | 1167 | 2664 | 381 | 2907 | 924 |
| ಚಿಂಚೋಳಿ | 1738 | 2332 | 4070 | 2339 | 1731 |
| ಸೇಡಂ | 959 | 3018 | 3977 | 2953 | 1024 |
| ಚಿತ್ತಾಪುರ | 892 | 2177 | 3069 | 2237 | 832 |
| ಜೇವರ್ಗಿ | 1499 | 3388 | 4887 | 3896 | 991 |
| ಕಾಳಗಿ | 743 | 1152 | 1895 | 1256 | 639 |
| ಗುಲ್ಬರ್ಗ ಉತ್ತರ | 735 | 1254 | 1989 | 1285 | 704 |
| ಯಡ್ರಾಮಿ | 1041 | 2163 | 3204 | 2290 | 914 |
| ಶಹಾಬಾದ | 20 | 377 | 579 | 444 | 135 |
| **ಒಟ್ಟು** | **12279** | **25057** | **37336** | **26974** | **10362** |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಆ) | 11ಇ ಸ್ಕೆಚ್ ಗೆ ಸ್ವೀಕೃತವಾದ ಅರ್ಜಿ ವಿಲೇವಾರಿ ಮಾಡಲು ನಿಗದಿ ಪಡಿಸಿದ ಅವಧಿ ಎಷ್ಟು; | 11ಇ ಸ್ಕೆಚ್ ಕೋರಿ ಸ್ವೀಕೃತವಾದ ಅರ್ಜಿಗಳನ್ನು ಭೂಮಾಪಕರಿಗೆ ಹಂಚಿಕೆಯಾದ ನಂತರ ವಿಲೇವಾರಿ ಮಾಡಲು 45 ದಿನಗಳ ಅವಧಿ ನಿಗಧಿಪಡಿಸಲಾಗಿದೆ. |
| ಇ) | 11ಇ ಸ್ಕೆಚ್ ಮಾಡುವಲ್ಲಿ ವಿಳಂಬ ವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ |
| ಈ) | ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣ ಗಳೇನು; ವಿಳಂಬ ತಪ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | **11ಇ ಪ್ರಕರಣಗಳ ವಿಲೇವಾರಿಯಲ್ಲಿಯ ವಿಳಂಬಕ್ಕೆ ಕಾರಣಗಳು**<br><br>1) 11ಇ ನಕ್ಷೆ ಕೋರಿರುವ ಜಮೀನುಗಳ ಆಕಾರಬಂದು ಮತ್ತು ಪಹಣಿಗಳಲ್ಲಿ ದಾಖಲಾಗಿರುವ ವಿಸ್ತೀರ್ಣದಲ್ಲಿ ವ್ಯತ್ಯಾಸ<br>2) 11ಇ ನಕ್ಷೆ ಕೋರಿರುವ ಜಮೀನುಗಳ ಪಹಣಿಯ ಕಾಲಂ ಮತ್ತು 9 ರಲ್ಲಿರುವ ಕ್ಷೇತ್ರದಲ್ಲಿ ವ್ಯತ್ಯಾಸ.<br>3) 11ಇ ನಕ್ಷೆ ಕೋರಿರುವ ಜಮೀನು ಮಂಜೂರಿ ಜಮೀನಾಗಿದ್ದಲ್ಲಿ ಸರ್ಕಾರದ ಸೂಚನೆಗಳನ್ವಯ ಭೂಮಂಜೂರಾತಿ ಪ್ರಕರಣಗಳಲ್ಲಿ ನಮೂನೆ 1 ರಿಂದ 5 ಭರ್ತಿ ಮಾಡಬೇಕಾಗಿದ್ದು ಈ ವೇಳೆ ಮಂಜೂರಾತಿ ದಾಖಲೆಗಳು ಸರಿಯಾಗಿ ಲಭ್ಯವಾಗದೇ ಇರುವುದರಿಂದ |

| | | |
|---|---|---|
| | | 4) 11ಇ ನಕ್ಷೆ ಕೋರಿರುವ ಜಮೀನು ಮಂಜೂರಿ ಜಮೀನಾಗಿದ್ದಲ್ಲಿ ಭೂಮಂಜೂರಾತಿ ಪ್ರಕರಣಗಳಲ್ಲಿ ಮಂಜೂರಿಯಂತೆ ಮತ್ತು ಅನುಭವದಂತೆ ಕ್ಷೇತ್ರದಲ್ಲಿ ವ್ಯತ್ಯಾಸ ಮತ್ತು ಸರ್ವೆ ನಂಬರನಲ್ಲಿ ವ್ಯತ್ಯಾಸವಿರುವುದರಿಂದ<br>5)ಭೂಮಂಜೂರಾತಿ ಪ್ರಕರಣಗಳಲ್ಲಿ ಜಮೀನಿನ ಆಕಾರ ಬಂದಿನ ವಿಸ್ತೀರ್ಣಕ್ಕಿಂತ ಹೆಚ್ಚಿನ ಕ್ಷೇತ್ರಕ್ಕೆ ಮಂಜೂರಿ ಆದೇಶ ಮಾಡಿರುವುದರಿಂದ, ಮಂಜೂರಿ ಆದೇಶ ಮತ್ತು ಪಹಣಿ ಸರಿಪಡಿಸುವಲ್ಲಿ ತೊಂದರೆ ಇರುವುದು,<br>6) 11ಇ ನಕ್ಷೆ ಕೋರಿರುವ ಜಮೀನಿನ ಮೂಲ ಭೂದಾಖಲೆಗಳು/ ಕಂದಾಯ ದಾಖಲೆಗಳು ಶಿಥಿಲವಾಗಿರುವುದನ್ನು ಪುನರ್ ನಿರ್ಮಾಣ ಮಾಡಲು ಹೆಚ್ಚಿನ ಕಾಲಾವಲಾಶ ಬೇಕಾಗುವುದು<br>7)ಅಳತೆ ವೇಳೆ ಗಡಿ ಮತ್ತು ಹಕ್ಕಿನ ಕುರಿತು ತಕರಾರು ಉದ್ಭವಿಸುವುದರಿಂದ<br>8) ಅರ್ಜಿದಾರರು ಹಕ್ಕು ಹೊಂದಿರುವ ಮತ್ತು ಅನುಭವದ ಸರ್ವೆ ನಂಬರ್ ಬೇರೆ ಬೇರೆಯಾಗಿರುವುದು<br>7)ಜಮೀನಿನ ಕುರಿತು ನ್ಯಾಯಾಲಯದಲ್ಲಿ ವಿವಾದಗಳಿರುವು ದರಿಂದ,<br>ಇತ್ಯಾದಿ ವಿವಿಧ ಕಾರಣಗಳಿಂದ 11ಇ ಪ್ರಕರಣಗಳ ವಿಲೇವಾರಿಯಲ್ಲಿ ವಿಳಂಬವಾಗುತ್ತಿರುತ್ತದೆ.<br>**<u>ಪೋಡಿ ಅರ್ಜಿಗಳ ಶೀಘ್ರ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು</u>**<br>1)ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ<br>2)ಕಂದಾಯ ಇಲಾಖೆಯ ಅಭಿಲೇಖಾಲಯದ ಎಲ್ಲಾ ಕಡತಗಳನ್ನು ಕ್ಯಾಟ-ಲಾಗ್ ಮತ್ತು ಇಂಡೆಕ್ಸಿಂಗ್ ಮಾಡಲು ಸೂಚಿಸಲಾಗಿದೆ.<br>3)ಸರ್ಕಾರದ ಸೂಚನೆಯನ್ವಯ ನಮೂನೆ 1 ರಿಂದ 5 ಅನ್ನು ಭರ್ತಿ ಮಾಡಲು ಅಗತ್ಯ ಸೂಚನೆ ಮತ್ತು ಮಾರ್ಗಸೂಚಿಗಳನ್ನು ನೀಡಲಾಗಿದೆ.<br>4)ಭೂಮಾಪನ ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್.ಲೈನ್ ನಲ್ಲಿ ಸ್ವೀಕರಿಸಲಾಗುತ್ತಿದ್ದು ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO (ಸರದಿ ಸಾಲಿನಂತೆ) ಅಳವಡಿಸಲಾಗಿದೆ, ಪ್ರಕರಣವು ಅಳತೆಗೆ ಯೋಗ್ಯವಾಗಿದ್ದಲ್ಲಿ FIFO (ಸರದಿ ಸಾಲಿನಂತೆ) ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಆನ್.ಲೈನ್.ನಲ್ಲಿ ವಿತರಿಸಲಾಗುತ್ತಿದೆ. ಪ್ರಕರಣದಲ್ಲಿ ಅಳತೆಯಾದ ನಂತರ ಭೂಮಾಪಕರು ಆನ್.ಲೈನ್ ನಲ್ಲಿ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ಆನ್.ಲೈನ್.ನಲ್ಲೇ ನಿರ್ವಹಿಸಲಾಗುತ್ತಿದೆ. ತಂತ್ರಾಂಶದ ಮುಖಾಂತರ, ಪ್ರಕರಣಗಳ ವಿಲೆವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ. |

| | | |
|---|---|---|
| | | 5)ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಸೂಚನೆ ನೀಡಲಾಗುತ್ತಿದೆ.<br>6)ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.<br>7) 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಅಧಿಸೂಚನೆ ಹೊರಡಿಸಿ ಅರ್ಜಿಗಳನ್ನು ಆಹ್ವಾನಿಸಿದ್ದು, ಕೋವಿಡ್-19 ಸಾಂಕ್ರಾಮಿಕ ರೋಗ ಹರಡುತ್ತಿದ್ದರಿಂದ ಸ್ಪರ್ಧಾತ್ಮಕ ಪರೀಕ್ಷೆಯನ್ನು ಮುಂದೂಡಲಾಗಿತ್ತು. ಈಗ ಸಾಮಾಜಿಕ ಅಂತರ ಕಾಯ್ದುಕೊಂಡು ಪರೀಕ್ಷೆಯನ್ನು ನಡೆಸಲು ಪರೀಕ್ಷಾ ದಿನಾಂಕವನ್ನು ನಿಗಧಿಪಡಿಸುವ ಕಾರ್ಯ ಪ್ರಗತಿಯಲ್ಲಿದೆ. ಶೀಘ್ರದಲ್ಲಿ ಪರೀಕ್ಷೆ ನಡೆಸಿ, ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ 4 ತಿಂಗಳ ತರಬೇತಿ ನೀಡಿ, ಅಂತಿಮ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪರವಾನಗಿ ನೀಡಿ ರಾಜ್ಯದ ವಿವಿಧ ತಾಲ್ಲೂಕುಗಳಿಗೆ ಕಾರ್ಯ ನಿಯೋಜನೆ ಮಾಡಲಾಗುವುದು. ಇದರಿಂದ ಬಾಕಿ ಪ್ರಕರಣಗಳ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ. |

<u>ಸಂಖ್ಯೆ: ಕಂಇ 176 ಎಸ್ಎಸ್‌ಸಿ 2020</u>

**(ಆರ್.ಅಶೋಕ)**

ಕಂದಾಯ ಸಚಿವರು